**ಕರ್ನಾಟಕ ಸರ್ಕಾರ**
**ಜಿಲ್ಲಾ ಪಂಚಾಯತ್, ಹಾಸನ**
**ಆಯುಷ್ ಇಲಾಖೆ**
**ಜಿಲ್ಲಾಆಯುಷ್ ಅಧಿಕಾರಿಗಳ ಕಛೇರಿ, ಹೊಸಲೈನ್‌ರಸ್ತೆ, ಹಾಸನ -573201,**

ಇ-ಮೇಲ್ ವಿಳಾಸ: dao.hassan09@gmail.com ದೂರವಾಣಿ ಸಂ: 08172-272272

ಸಂಖ್ಯೆ: ಜಿಆಕಹಾ/ಸಿ.ಎಸ್.ಎಸ್/90/ನೇಮಕಾತಿ/2022-23 ದಿನಾಂಕ: 29-11-2023.

## ಕೇಂದ್ರ ಪುರಸ್ಕೃತ ಯೋಜನೆಯಡಿ ಗುತ್ತಿಗೆ ನೇಮಕಾತಿ ಅಧಿಸೂಚನೆ

ವಿಷಯ:- ಕೇಂದ್ರ ಪುರಸ್ಕೃತಯೋಜನೆಯಡಿ ತಾತ್ಕಾಲಿಕವಾಗಿ ಮಂಜೂರಾಗಿರುವ ವೈದ್ಯಕೀಯ/ ಅರೆವೈದ್ಯಕೀಯ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಅರ್ಜಿ ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ:- 1.ಆಯುಷ್ ನಿರ್ದೇಶನಾಲಯದ ಪತ್ರ ಸಂ: ಆಯುಷ್/69/ನ್ಯಾಮ್/2021-22, ದಿ: 17-01-2023.
2. ಆಯುಷ್ ನಿರ್ದೇಶನಾಲಯದ ಪತ್ರ ಸಂ: ಆಯುಷ್/101/ನ್ಯಾಮ್/2022-23, ದಿ: 1-10-2023.
3. ಆಯುಷ್ ನಿರ್ದೇಶನಾಲಯದ ಪತ್ರ ಸಂ: ಆಯುಷ್/69/ನ್ಯಾಮ್/2021-22, ದಿ: 13-10-2023.
4. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಆಯುಷ್/07/ಐಇಸಿ(3)/2015-16, ದಿ: 21-08-2019
5. ದಿ: 26-10-2023 ಕಛೇರಿ ಟಿಪ್ಪಣಿ ಕಂಡಿಕೆ (19)ರಲ್ಲಿ ಜಿಲ್ಲಾಧಿಕಾರಿಗಳ ಅನುಮೋದನೆಯಂತೆ.
6. ಇದೇ ಸಮಸಂಖ್ಯೆಯ ಪತ್ರದ ದಿ: 10-03-2023ರಲ್ಲಿ ಮೀಸಲಾತಿ ನಿಗದಿಪಡಿಸಿರುವಂತೆ.
7. ಇದೇ ಸಮಸಂಖ್ಯೆಯ ಪತ್ರದ ದಿ: 21-11-2023ರಲ್ಲಿ ಮೀಸಲಾತಿ ನಿಗದಿಪಡಿಸಿರುವಂತೆ.
8. ಇದೇ ಸಮಸಂಖ್ಯೆಯ ಪತ್ರದ ನೇಮಕಾತಿ ಅಧಿಸೂಚನೆ ದಿನಾಂಕ:18-03-2023.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (08) ರಲ್ಲಿ ಅಧಿಸೂಚಿಸಲಾದ ಹುದ್ದೆಗಳಿಗೆ ಈಗಾಗಲೇ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಸಲಾಗಿದ್ದು ಉಲ್ಲೇಖ (03)ರಲ್ಲಿ ಸೂಚಿಸಿರುವಂತೆ ಸಕಲೇಶಪುರ ಮತ್ತು ಅರಸೀಕೆರೆ ಆಸ್ಪತ್ರೆಗಳ ಖಾಲಿ ಹುದ್ದೆಗಳಿಗೆ ಹೊಸದಾಗಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ ಹಾಗೂ ಉಲ್ಲೇಖ (1)ರಲ್ಲಿನ ಉಳಿದ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಮತ್ತು ಉಲ್ಲೇಖ (2)ರಂತೆ ಸಮುದಾಯ ಆರೋಗ್ಯ ಅಧಿಕಾರಿಗಳನ್ನು ನೇಮಕಾತಿ ಮಾಡಲಾಗುತ್ತಿದೆ. ಆದ್ದರಿಂದ ಮೇಲಿನ ಉಲ್ಲೇಖಿತ ಪತ್ರಗಳನ್ವಯ ಮೇಲ್ದರ್ಜೇಗೇರಿಸಿರುವ ಆಸ್ಪತ್ರೆಗಳಿಗೆ ಮತ್ತು ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಮಂಜೂರಾಗಿರುವ ತಜ್ಞವೈದ್ಯರು, ಸಮುದಾಯ ಆರೋಗ್ಯ ಅಧಿಕಾರಿಗಳು ಮತ್ತು ಅರೆವೈದ್ಯಕೀಯ ಸಿಬ್ಬಂದಿಗಳ ನೇಮಕಾತಿಗಾಗಿ ಉಲ್ಲೇಖ (5) ರಲ್ಲಿ ಆಯ್ಕೆ ಸಮಿತಿಯ ಅಧ್ಯಕ್ಷರು ನೇಮಕಾತಿ ಮಾಡಲು ಅನುಮತಿಸಿರುವಂತೆ ವಿವಿಧ ಹುದ್ದೆಗಳಿಗೆ ವಿದ್ಯಾರ್ಹತೆಗನುಗುಣವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ದಿನಾಂಕ: 29-11-2023 ರಿಂದ ವೆಬ್‌ಸೈಟ್ ವಿಳಾಸ www.hassan.nic.in ಇಲ್ಲಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಕೊನೆಯ ದಿನಾಂಕ: 28-12-2023ರ ಸಂಜೆ 4.30 ಗಂಟೆಯ ವರೆಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಈ ಕಛೇರಿ ವಿಳಾಸಕ್ಕೆ ಸಲ್ಲಿಸಿದ್ದಲ್ಲಿ ಮಾತ್ರ ಪರಿಗಣಿಸಲಾಗುವುದು. ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಷರತ್ತು & ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹಾಸನ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

| ಕ್ರ. ಸಂ | ಹುದ್ದೆಗಳ ಹೆಸರು | ಹುದ್ದೆಗಳು ಖಾಲಿ ಇರುವ ಸ್ಥಳ | ಸಂಖ್ಯೆ | ಮೀಸಲಾತಿ | ಸಮತಳ ಮೀಸಲಾತಿ | ಸಂಚಿತ ವೇತನ ಮಾಹೆಯಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|---|---|---|
| 1. | ತಜ್ಞ ವೈದ್ಯರು (ಆಯುರ್ವೇದ) | ಹಾಸನ | 01 | ಸಾಮಾನ್ಯ | ಅಂ.ಅ (ದೃಷ್ಟಿ ಮಾಂದ್ಯ) | ರೂ. 52,550/- ಮತ್ತು (5000/- ಸ್ನಾತಕೋತ್ತರ ಭತ್ಯೆ) | ಬಿ.ಎ.ಎಂ.ಎಸ್ ಜೊತೆಗೆ ಶಲ್ಯತಂತ್ರ/ ಪಂಚಕರ್ಮ/ ಕಾಯ ಚಿಕಿತ್ಸಾ ವೈದ್ಯಕೀಯ ವಿಷಯದಲ್ಲಿ ಸ್ನಾತಕೋತ್ತರ ಪದವಿ. |

| | | | | | | | |
|---|---|---|---|---|---|---|---|
| 2. | ತಜ್ಞ ವೈದ್ಯರು (ಯೋಗ& ಪ್ರಕೃತಿ ಚಿಕಿತ್ಸೆ) | ಸಕಲೇಶಪುರ | 01 | ಪ.ಪಂ | ಗ್ರಾಮೀಣ | ರೂ. 52,550/- ಮತ್ತು (5000/- ಸ್ನಾತಕೋತ್ತರ ಭತ್ಯೆ) | ಪ್ರಕೃತಿ ಚಿಕಿತ್ಸೆ & ಯೋಗ ವೈದ್ಯಕೀಯ ವಿಷಯದಲ್ಲಿ ಸ್ನಾತಕೋತ್ತರ ಪದವಿ. ಸ್ನಾತಕೋತ್ತರ ಪದವಿ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಬಿ.ಎನ್.ವೈ.ಎಸ್ ಪದವಿ ಜೊತೆಗೆ ಮೂರು ವರ್ಷಗಳ ಅನುಭವ ಇರುವವರಿಗೆ ಆದ್ಯತೆ(ಇವರಿಗೆ ಸ್ನಾತಕೋತ್ತರ ಭತ್ಯೆ ನೀಡಲಾಗುವುದಿಲ್ಲ.) |
| 3. | ಔಷಧಿ ವಿತರಕರು | ಹಾಸನ | 01 | ಪ. ಜಾ | ಇತರೆ | 27,550/- | ಎಸ್.ಎಸ್.ಎಲ್.ಸಿ ವಿದ್ಯಾರ್ಹತೆ ಹಾಗೂ ಔಷಧಿ ವಿಜ್ಞಾನದಲ್ಲಿ ಡಿಪ್ಲೋಮ ಹೊಂದಿರಬೇಕು. (ಡಿ-ಫಾರ್ಮ) |
| | | ಚನ್ನರಾಯಪಟ್ಟಣ | 01 | ಪ. ಪಂ | ಗ್ರಾಮೀಣ | | |
| | | ಹೊಳೆನರಸೀಪುರ | 01 | ಸಾಮಾನ್ಯ | ಅಂ.ಅ (ದೃಷ್ಟಿ ಮಾಂದ್ಯ) | | |
| | | ಅರಸೀಕೆರೆ | 01 | ಸಾಮಾನ್ಯ | ಗ್ರಾಮೀಣ | | |
| | | ಸಕಲೇಶಪುರ | 01 | 2ಎ | ಸಾಮಾನ್ಯ | | |
| 4. | ಮಸಾಜಿಸ್ಟ್ | ಅರಸೀಕೆರೆ | 01 | ಸಾಮಾನ್ಯ | ಮಹಿಳಾ | 18,500/- | ಕನಿಷ್ಟ 7ನೇ ತರಗತಿ ವಿದ್ಯಾರ್ಹತೆ ಹಾಗೂ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಮಸಾಜಿಸ್ಟ್‌ಗಳಾಗಿ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರಬೇಕು. |
| | | ಸಕಲೇಶಪುರ | 01 | ಪ.ಪಂ | ಗ್ರಾಮೀಣ | | |
| 5. | ಮಲ್ಟಿಪರ್ಪಸ್ ವರ್ಕರ್ | ಸಕಲೇಶಪುರ | 01 | ಪ.ಜಾ | ಸಾಮಾನ್ಯ | 16,900/- | ಕನಿಷ್ಟ 10 ನೇ ತರಗತಿ ವಿದ್ಯಾರ್ಹತೆ |
| 6. | ಸಮುದಾಯ ಆರೋಗ್ಯ ಅಧಿಕಾರಿ | ಉದೇವಾರ | 01 | ಪ.ಜಾ | ಸಾಮಾನ್ಯ | 40,000/- (25,000/- ಸಂಚಿತ ವೇತನ ಮತ್ತು 15,000/- ಕಾರ್ಯ ಕ್ಷಮತೆ ಆಧಾರಿತ ಭತ್ಯೆ.) | ಆಯುರ್ವೇದ ವೈದ್ಯಕೀಯ ವಿಜ್ಞಾನದಲ್ಲಿ ಪದವಿ (ಬಿ.ಎ.ಎಂ.ಎಸ್) |
| | | ಜಿ-ಪುರ | 01 | ಸಾಮಾನ್ಯ | ಮಹಿಳಾ | | |
| | | ನಾರ್ವೆ | 01 | ಪ.ಪಂ | ಗ್ರಾಮೀಣ | | ಯುನಾನಿ ವೈದ್ಯಕೀಯ ವಿಜ್ಞಾನದಲ್ಲಿ ಪದವಿ (ಬಿ.ಯು.ಎಂ.ಎಸ್) |

**ಸೂಚನೆ:-**

ಪ.ಜಾ- ಪರಿಶಿಷ್ಟ ಜಾತಿಅಭ್ಯರ್ಥಿ,
ಪ.ಪಂ- ಪರಿಶಿಷ್ಟ ಪಂಗಡ ಅಭ್ಯರ್ಥಿ
ಪ್ರ-1- ಪ್ರವರ್ಗ 1 ಅಭ್ಯರ್ಥಿ

ಸಾಮಾನ್ಯ- ಸಾಮಾನ್ಯ ಅಭ್ಯರ್ಥಿ,
2ಎ- ಪ್ರವರ್ಗ 2ಎ ಅಭ್ಯರ್ಥಿ
ಮಹಿಳಾ- ಮಹಿಳಾ ಅಭ್ಯರ್ಥಿ

ಗ್ರಾಮೀಣ- ಗ್ರಾಮೀಣ ಅಭ್ಯರ್ಥಿ,
ಅಂ.ಅ- ಅಂಗವಿಕಲ ಅಭ್ಯರ್ಥಿ,

**ಅಭ್ಯರ್ಥಿಗಳಿಗೆ ವಿಶೇಷ ಸೂಚನೆ:**

1. **ವಯೋಮಿತಿ:**-ದಿನಾಂಕ:28-12-2023ರಂದು ಎಲ್ಲಾ ವರ್ಗದವರು ಕನಿಷ್ಠ 18 ವರ್ಷ ಪೂರ್ಣಗೊಂಡಿರತಕ್ಕದ್ದು ಹಾಗೂ ಗರಿಷ್ಠ ಪ.ಜಾತಿ ಮತ್ತು ಪ.ಪಂಗಡದವರಿಗೆ 40 ವರ್ಷ, ಪ್ರ-1, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ 38 ವರ್ಷ, ಹಾಗೂ ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷ ಮೀರಿರಬಾರದು.
2. **ಜಾತಿ ಪ್ರಮಾಣ ಪತ್ರ:**-
   ಎ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ನಮೂನೆ-ಡಿ
   ಬಿ) ಪ್ರವರ್ಗ -1 ರ ಅಭ್ಯರ್ಥಿಗಳು ನಮೂನೆ-ಇ
   ಸಿ) ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ -ಎಫ್

ಮೇಲ್ಕಂಡ ಜಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ಚಾಲ್ತಿಯಲ್ಲಿರುವಂತೆ ಸಂಬಂಧಿಸಿದ ತಹಶೀಲ್ದಾರರಿಂದ ಪಡೆದಿರಬೇಕು.

3. ಅರ್ಜಿಯಲ್ಲಿ ಭರ್ತಿ ಮಾಡಿರುವ ಮೀಸಲಾತಿಯನ್ನು ಮಾತ್ರ ಪರಿಗಣಿಸಲಾಗುವುದು, ಹೆಚ್ಚಿನ ವಿದ್ಯಾರ್ಹತೆ ಅಥವಾ ತದನಂತರದ ಮೀಸಲಾತಿ ಪರಿಗಣನೆಗೆ ಅವಕಾಶವಿರುವುದಿಲ್ಲ. ಒಮ್ಮೆ ಸಲ್ಲಿಸಿದ ಅರ್ಜಿಯಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.
4. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದಲ್ಲಿ ಹುದ್ದೆವಾರು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಪಕ್ಷದಲ್ಲಿ ಅರ್ಜಿಗಳು ಸ್ವಯಂ ತಿರಸ್ಕೃತಗೊಳ್ಳಲಿದೆ.
5. ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಅರ್ಜಿಯ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ಅರ್ಜಿಗಳನ್ನು ಅಪೂರ್ಣ ಹಾಗೂ ಸಲ್ಲಿಸಿದಲ್ಲಿ ಪ್ರಾರಂಭಿಕ ಹಂತದಲ್ಲಿಯೇ ತಿರಸ್ಕೃತಗೊಳಿಸಲಾಗುವುದು.
6. ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರನ್ನು ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ನಮೂದಿಸುವುದು. ನಮೂದಿಸದೆ ಇದ್ದಲ್ಲಿ ಅರ್ಜಿಯನ್ನು ತಿರಸ್ಕೃತಗೊಳಿಸಲಾಗುವುದು.
7. **ಜನ್ಮ ದಿನಾಂಕ ದೃಢೀಕರಣ ಪತ್ರ**:- (ಎಸ್.ಎಸ್.ಎಲ್.ಸಿ / ಜನನ ಪ್ರಮಾಣ ಪತ್ರ / ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿ ಅಥವಾ ಶಾಲಾ ವರ್ಗಾವಣೆ ಪ್ರಮಾಣ ಪತ್ರ ಅಥವಾ ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತಭಾಗ (Extract of Cumulative Record).
8. **ಗ್ರಾಮೀಣಾ ಅಭ್ಯರ್ಥಿ ಮೀಸಲಾತಿ**:- 01 ರಿಂದ 10 ನೇ ತರಗತಿ ವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಪ್ರಮಾಣ ಪತ್ರವನ್ನು ಮುಖ್ಯೋಪಾಧ್ಯಯರಿಂದ ಪಡೆದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿರತಕ್ಕದ್ದು.
9. **ಕನ್ನಡ ಮಾದ್ಯಮ ಅಭ್ಯರ್ಥಿ**:-01 ರಿಂದ 10 ನೇ ತರಗತಿ ವರೆಗೆ ಕನ್ನಡ ಮಾದ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಪ್ರಮಾಣ ಪತ್ರವನ್ನು ಮುಖ್ಯೋಪಾಧ್ಯಯರಿಂದ ಪಡೆದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿರತಕ್ಕದ್ದು.
10. **ಅಂಗವಿಕಲ ಅಭ್ಯರ್ಥಿ ಮೀಸಲಾತಿ**:- ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ/115/ಸೇನನಿ/2005, ದಿನಾಂಕ: 19-11-2005 ರಲ್ಲಿ ನಿಗಧಿಪಡಿಸಿರುವ ನಮೂನೆಯಲ್ಲಿ ಅಂಗವಿಕಲ ಪ್ರಮಾಣ ಪತ್ರವನ್ನು ಸರ್ಕಾರಿ ಆಸ್ಪತ್ರೆಗಳಲ್ಲಿನ ವೈದ್ಯಕೀಯ ಮಂಡಳಿಯಿಂದ ಪಡೆದಿರಬೇಕು.
11. **ಯೋಜನಾ ನಿರಾಶ್ರಿತ ಮೀಸಲಾತಿ**:- ಸರ್ಕಾರದ ಅಧಿಸೂಚನೆ ದಿನಾಂಕ: 23-11-2000 ನಮೂನೆಯಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ಚಾಲ್ತಿಯಲ್ಲಿರುವಂತೆ ಸಂಬಂಧಿಸಿದ ತಹಶೀಲ್ದಾರರಿಂದ ಪಡೆದಿರಬೇಕು.
12. **ಮಾಜಿ ಸೈನಿಕರ ಮೀಸಲಾತಿ**:- ಅರ್ಜಿಯಲ್ಲಿ ಮಾಜಿ ಸೈನಿಕ ಮೀಸಲಾತಿಯನ್ನು ಕೋರಿರುವ ಅಭ್ಯರ್ಥಿಗಳು ಸೇವೆಯಿಂದ ಬಿಡುಗಡೆಯಾದ ನಂತರ ನೀಡಿದ ಬಿಡುಗಡೆ ಪ್ರಮಾಣ ಪತ್ರವನ್ನು ಹಾಜರು ಪಡಿಸತಕ್ಕದ್ದು.
13. **ತಜ್ಞವೈದ್ಯರು ಮತ್ತು ಸಮುದಾಯ ಆರೋಗ್ಯ ಅಧಿಕಾರಿಗಳ ಹುದ್ದೆಗೆ** ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಸಂಬಂಧಿಸಿದ ನೊಂದಣಿ ಪ್ರಾಧಿಕಾರಗಳಿಂದ ನೊಂದಣಿ ಮಾಡಿಸಿರಬೇಕು. ತಮ್ಮ ವಿದ್ಯಾರ್ಹತೆಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಅನುಭವ ಇದ್ದಲ್ಲಿ ಪ್ರಮಾಣ ಪತ್ರಗಳನ್ನು ಲಗತ್ತಿಸಿ ಸಲ್ಲಿಸಬೇಕು.
14. **ಔಷಧಿ ವಿತರಕರ ಹುದ್ದೆಗೆ ಅರ್ಜಿ** ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಸಂಬಂಧಿಸಿದ ಪ್ರಾಧಿಕಾರದಿಂದ ನೊಂದಣಿ ಮಾಡಿಸಿರಬೇಕು.
15. ಸದರಿ ಹುದ್ದೆಗಳಿಗೆ ಗುತ್ತಿಗೆ ಅವಧಿಯು ದಿನಾಂಕ: 31-03-2024 ರವರೆಗೆ ಚಾಲ್ತಿಯಲ್ಲಿರುತ್ತದೆ.
16. ಸಮುದಾಯ ಆರೋಗ್ಯ ಅಧಿಕಾರಿಗಳ ಹುದ್ದೆಯ ಗುತ್ತಿಗೆ ಅವಧಿಯು 01 ವರ್ಷದವರೆಗೆ ಅಥವಾ ರಾಜ್ಯ ಸರ್ಕಾರದದಿಂದ ಆಯುಷ್ ಕ್ಷೇಮ ಕೇಂದ್ರಗಳಿಗೆ ವೈದ್ಯಾಧಿಕಾರಿಗಳ ಹುದ್ದೆಯು ಭರ್ತಿಯಾಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೂ ಮಾತ್ರ ಚಾಲ್ತಿಯಲ್ಲಿರುತ್ತದೆ.
17. ನಿಗಧಿಪಡಿಸಿದ ಮೀಸಲಾತಿಯ/ ಸಮತಳ ಮೀಸಲಾತಿಯ ಅಭ್ಯರ್ಥಿಗಳು ದೊರೆಯದಿದ್ದ ಪಕ್ಷದಲ್ಲಿ ಈ ಹುದ್ದೆಗಳನ್ನು ನೇಮಕಾತಿ ಸಮಿತಿಯ ಅನುಮೋದನೆಯಂತೆ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಪರಿವರ್ತಿಸಿ ಭರ್ತಿ ಮಾಡಲು ಅವಕಾಶ ನೀಡಲಾಗುವುದು.
18. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಪ್ರಕ್ರಿಯೆ ಮೂಲಕ ನೇಮಕಾತಿ ಮಾಡಲಾಗುವುದು. ಎಲ್ಲಾ ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕ ಹುದ್ದೆಗಳಾಗಿದ್ದು ನಿರ್ದೇಶನಾಲಯದ ಆದೇಶದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
19. ಅರ್ಜಿಗಳನ್ನು ಸಲ್ಲಿಸಲು ಯಾವುದೇ ಶುಲ್ಕವಿರುವುದಿಲ್ಲ.

## ಆಯ್ಕೆ ಪ್ರಕ್ರಿಯೆ:

1. **ತಜ್ಞ ವೈದ್ಯರ ಹುದ್ದೆಗಳಿಗೆ**: ಸ್ನಾತಕೋತ್ತರ ಪದವಿ ವೈದ್ಯರನ್ನು ಆಯ್ಕೆ ಮಾಡಲು ಅಭ್ಯರ್ಥಿಗಳು ಪದವಿಯಲ್ಲಿ ಪಡೆದಿರುವ ಎಲ್ಲಾ ಪರೀಕ್ಷೆಗಳ ಅಂಕಗಳನ್ನು ಒಟ್ಟುಗೂಡಿಸಿ ಶೇಕಡವಾರು ಅಂಕಗಳಿಗೆ ಲೆಕ್ಕ ಮಾಡಿ ಮೆರಿಟ್ ಹಾಗೂ ಮೀಸಲಾತಿಯನ್ವಯ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.

2. **ಔಷಧಿ ವಿತರಕರು**: ಔಷಧಿ ವಿಜ್ಞಾನದಲ್ಲಿ ಡಿಪ್ಲೋಮಾ ವಿದ್ಯಾರ್ಹತೆಯಲ್ಲಿ ಪಡೆದಿರುವ ಎಲ್ಲಾ ಪರೀಕ್ಷೆಗಳ ಅಂಕಗಳನ್ನು ಒಟ್ಟುಗೂಡಿಸಿ ಶೇಕಡವಾರು ಅಂಕಗಳಿಗೆ ಲೆಕ್ಕ ಮಾಡಿ ಮೆರಿಟ್ ಹಾಗೂ ಮೀಸಲಾತಿಯನ್ವಯ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.
3. **ಮಸಾಜಿಸ್ಟ್**: ಮಸಾಜಿಸ್ಟ್ ತರಬೇತಿ/ಅನುಭವವನ್ನು ಹೊಂದಿರುವ ಅಭ್ಯರ್ಥಿಗಳ 7ನೇ ತರಗತಿ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳನ್ನು ಒಟ್ಟುಗೂಡಿಸಿ ಶೇಕಡವಾರು ಅಂಕಗಳಿಗೆ ಲೆಕ್ಕ ಮಾಡಿ ಮೆರಿಟ್ ಹಾಗೂ ಮೀಸಲಾತಿಯನ್ವಯ ಸಂದರ್ಶನದ ಮೂಲಕಆಯ್ಕೆ ಮಾಡಲಾಗುವುದು.
4. **ಮಲ್ಟಿಪರ್ಪಸ್ ವರ್ಕರ್**: ಅಭ್ಯರ್ಥಿಗಳ 10ನೇ ತರಗತಿ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳನ್ನು ಒಟ್ಟುಗೂಡಿಸಿ ಶೇಕಡವಾರು ಅಂಕಗಳಿಗೆ ಲೆಕ್ಕ ಮಾಡಿ ಮೆರಿಟ್ ಹಾಗೂ ಮೀಸಲಾತಿಯನ್ವಯ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.
5. **ಸಮುದಾಯ ಆರೋಗ್ಯ ಅಧಿಕಾರಿಗಳು**: ಹುದ್ದೆಗೆ ಅಭ್ಯರ್ಥಿಗಳು ಪದವಿಯಲ್ಲಿ ಪಡೆದಿರುವ ಎಲ್ಲಾ ಪರೀಕ್ಷೆಗಳ ಅಂಕಗಳನ್ನು ಒಟ್ಟುಗೂಡಿಸಿ ಶೇಕಡವಾರು ಅಂಕಗಳಿಗೆ ಲೆಕ್ಕ ಮಾಡಿ ಮೆರಿಟ್ ಹಾಗೂ ಮೀಸಲಾತಿಯನ್ವಯ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.

ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಮಟ್ಟದ ಆಯುಷ್ ನೇಮಕಾತಿ ಸಮಿತಿ/
ಜಿಲ್ಲಾ ಆಯುಷ್ ಅಧಿಕಾರಿಗಳು, ಹಾಸನ.

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಗೌವಪೂರ್ವಕವಾಗಿ: -**

1. ಮಾನ್ಯ ಆಯುಕ್ತರು, ಆಯುಷ್ ನಿರ್ದೇಶನಾಲಯ, ಬೆಂಗಳೂರು ರವರಿಗೆ.
2. ಮಾನ್ಯ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಛೇರಿ, ಹಾಸನ ರವರಿಗೆ,
3. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ರವರಿಗೆ.
4. ಸಮಾಜ ಕಲ್ಯಾಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ಹಾಸನ ರವರಿಗೆ.
5. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಹಾಸನ ರವರಿಗೆ.
6. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**Zillapanchyath Hassan**
**Department of Ayush**
**DistrictAyush office,Hosaline Road, Hassan, Ph No: 08172-272272**

**No:DAOH/90/CSS/Recruitment/2022-23,** **Date: 29-11-2023**

# CSS Contract Recruitment Notification

**Sub:** Applications are invited from eligible candidates to fill up Vacant posts on Contract basis in CSS Scheme to the Ayush hospitals in Hassan District

Applications are invited to fill up the Specialist Doctors, Paramedical staffs and Community Health Officer to the following Ayush hospitals temporarily, Purely on Contract basis. Applications available in www.hassan.nic.in and Submitted to District Ayush Office from Date: 29-11-2023 on all working days between 10:00 Am to 4:30 Pm. Last date for receiving duly filled applications is 28-12-2023 4:30 Pm. Incomplete applications & applications received after the last date will not be considered. For more information, terms & conditions contact District Ayush Office, Hassan.

| Sl. No | Post Name | Vacant Places | No. | Reservation | Sub Reservation | Consolidated Pay | Minimum Qualification |
|---|---|---|---|---|---|---|---|
| 1 | Specialist Doctor (AYU) | Hassan | 1 | General | PH (low vision) | **Rs. 52,550 /- + (5000 PG Allowance)** | BAMS and MS in Shalyatantra MD in Panchakarma /Kayachikitsa |
| | Specialist Doctor (BNYS) | Sakaleshpura | 1 | ST | Rural | | BNYS and Post Graduate degree in Yoga & Naturopathy If Post Graduates are not available BNYS Degree may be considered with 3 years of experience, without PG allowance |
| 2 | Pharamcist | Hassan | 1 | General | Women | **27,550/-** | SSLC & Diploma in Pharmacy Education (D. Pharma) |
| | | Channarayapattana | 1 | ST | Rural | | |
| | | Holenarasipura | 1 | General | PH | | |
| | | Arasikere | 1 | General | Rural | | |
| | | Sakaleshpura | 1 | Cat 2A | General | | |
| 3 | Masagist | Arasikere | 1 | General | Women | **18,500/-** | Minimum 7th Std. and working experience in as Massagist in Ayush hospitals/ Dispensaries |
| | | Sakaleshapura | 1 | ST | Rural | | |

| | | | | | | | |
|---|---|---|---|---|---|---|---|
| 6 | Multipurpose Worker | Sakaleshpura | 1 | SC | General | **16,900/-** | Minimum SSLC Pass |
| 7 | Community Health Officer | H&WC Udevara | 1 | SC | General | **40,000/- (25000.00 as Cumulative Pay + 15000.00 as Performance Linked Pay-PLP )** | Minimum BAMS degree |
| | | H&WC G Pura | 1 | General | Women | | |
| | | H&WC Narve | 1 | ST | Rural | | Minimum BUMS degree |

**Special Instructions:**

1. Age as per last Date:28-12-2023 of submission of application should be 18 years completed and maximum of 40 years for SC & ST candidates, 38 years for Cat-1, 2A, 2B, 3A, 3B candidates and 35 years for General.
2. Application available in www.hassan.nic.in at free of cost.
3. The selection and appointment will be done by a committee presided by the Honorable District Commissioner.
4. All posts are on contract basis and temporary posts only. All terms and conditions of Directorate of AYUSH are applicable for selection process.

**Member Secretary,**
**District level AYUSH Recruitment Committee/**
**District Ayush Officer, Hassan.**

**ಕರ್ನಾಟಕ ಸರ್ಕಾರ**
**ಜಿಲ್ಲಾ ಪಂಚಾಯತ್, ಹಾಸನ**
**ಆಯುಷ್ ಇಲಾಖೆ**
**ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹೊಸಲೈನ್ ರಸ್ತೆ, ಹಾಸನ –573201,**
ದೂರವಾಣಿ ಸಂ: 08172–272272

---

## ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಅರ್ಜಿ ನಮೂನೆ

**ರವರಿಗೆ,**

ಮಾನ್ಯ ಸದಸ್ಯ ಕಾರ್ಯದರ್ಶಿಗಳು/
ಜಿಲ್ಲಾ ಆಯುಷ್ ಅಧಿಕಾರಿಗಳು
ಹಾಸನ.

Please affix recent passport size color photo.

Do not staple the photo

**ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರು :** ______________________________

1. ಅರ್ಜಿದಾರನ/ಳ ಪೂರ್ಣ ಹೆಸರು : ______________________________
2. ತಂದೆ/ಪೋಷಕರ ಹೆಸರು : ____________________________________________
3. ಖಾಯಂ ವಿಳಾಸ :____________________________________________
   ____________________________________________
   ____________________________________________
4. ಅಂಚೆ ವಿಳಾಸ : ____________________________________________
   ____________________________________________
   ____________________________________________
5. ಸಂಪರ್ಕಿಸ ಬಹುದಾದ ದೂರವಾಣಿ ಸಂಖ್ಯೆ :
   ಮೊಬೈಲ್ :________________________________
   ಸ್ಥಿರ ದೂರವಾಣಿ : ___________________________________
6. ಇ–ಮೇಲ್ ವಿಳಾಸ : ____________________________________________
7. ಲಿಂಗ :

| ಪುರುಷ | | ಮಹಿಳೆ | |
|---|---|---|---|

8. ಜನ್ಮ ದಿನಾಂಕ (ದೃಢೀಕರಣ ಪತ್ರ ಲಗತ್ತಿಸುವುದು) :

| | | | | | | | |
|---|---|---|---|---|---|---|---|
| | | | | | | | |

9. ಮೀಸಲಾತಿ ಕೋರಿದ್ದಲ್ಲಿ: ಅನ್ವಯಿಸುವ ಬಾಕ್ಸ್‌ನಲ್ಲಿ (√) ಗುರುತು ಹಾಕಿ.
   (ದೃಢೀಕರಣ ಪತ್ರ ಲಗತ್ತಿಸುವುದು)

| ಪ. ಜಾ | ಪ. ಪಂ | ಪ್ರವ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ |
|---|---|---|---|---|---|---|---|

APPLICATION

10. ವಿದ್ಯಾರ್ಹತೆ: ಅಧಿಸೂಚನೆಯಲ್ಲಿ ನೀಡಿರುವಂತೆ.

| ಕ್ರ. ಸಂ. | ವಿದ್ಯಾರ್ಹತೆ | ಒಟ್ಟು ಅಂಕಗಳು | ಗಳಿಸಿದ ಅಂಕಗಳು | ಶೇಕಡ |
|---|---|---|---|---|
| 1. | | | | |
| 2. | | | | |
| 3. | | | | |
| 4. | | | | |
| 5. | | | | |
| 6. | | | | |

**ಸೂಚನೆ:**

- ತಜ್ಞವೈದ್ಯರು ಮತ್ತು ಸಮುದಾಯ ಆರೋಗ್ಯ ಅಧಿಕಾರಿಗಳ ಹುದ್ದೆಗೆ ಅರ್ಜಿಯೊಂದಿಗೆ ಸ್ವಯಂ ಧೃಡೀಕೃತ ಪದವಿಯ ಎಲ್ಲಾ ವರ್ಷಗಳ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರ, ಸ್ನಾತಕೋತ್ತರ ಪದವಿ ಪ್ರಮಾಣ ಪತ್ರ, ಕೆ.ಎ.ಯು.ಪಿ ರಿಜಿಸ್ಟ್ರೇಷನ್ ಪತ್ರ ಹಾಗೂ ಮೀಸಲಾತಿ ಪ್ರಮಾಣ ಪತ್ರಗಳನ್ನು (ಚಾಲ್ತಿಯಲ್ಲಿರುವಂತೆ) ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ಅರೆವೈದ್ಯಕೀಯ ಸಿಬ್ಬಂದಿ ಹುದ್ದೆಗಳಿಗೆ ಅರ್ಜಿಯೊಂದಿಗೆ ಸ್ವಯಂ ಧೃಡೀಕೃತ ವಿದ್ಯಾರ್ಹತೆ, ಮೀಸಲಾತಿ ಪ್ರಮಾಣ ಪತ್ರ (ಚಾಲ್ತಿಯಲ್ಲಿರುವಂತೆ) ಹಾಗೂ ಅನುಭವದ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ಅರ್ಜಿಯ ಜೊತೆಗೆ ಲಗತ್ತಿಸಿರುವ ಪರಿಶೀಲನಾ ಪಟ್ಟಿಯನ್ನು ಕಡ್ಡಾಯವಾಗಿ ಭರ್ತಿ ಮಾಡಿ ಈ ಅರ್ಜಿಯೊಂದಿಗೆ ಲಗತ್ತಿಸ ತಕ್ಕದ್ದು.
- ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರನ್ನು ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ನಮೂದಿಸುವುದು.
- ಹೆಚ್ಚಿನ ಮಾಹಿತಿಗಾಗಿ ಈ ವೆಬ್‌ಸೈಟ್ https://hassan.nic.in ಇಲ್ಲಿ ಸಂಪರ್ಕಿಸುವುದು.

**ಅಭ್ಯರ್ಥಿಯ ಘೋಷಣೆ :**

ಈ ಪ್ರಕಟಣೆಯಲ್ಲಿ ನೀಡಿರುವ ಎಲ್ಲಾ ಸೂಚನೆಗಳನ್ನು ಜಾಗರೂಕತೆಯಿಂದ ಓದಿಕೊಂಡಿದ್ದು, ಅವುಗಳಿಗೆ ನಾನು ಬದ್ಧನಾಗಿರುತ್ತೇನೆ/ಳೆ. ನಾನು ಈ ಸದರಿ ಹುದ್ದೆಗೆ ನಿಗಧಿಪಡಿಸಲಾದ ವಿದ್ಯಾರ್ಹತೆ, ವಯೋಮಿತಿ ಮತ್ತು ಮೀಸಲಾತಿ ಇತ್ಯಾದಿ ಎಲ್ಲಾ ನಿಬಂಧನೆಗಳನ್ನು ಓದಿ ತಿಳಿದು ಕೊಂಡಿರುತ್ತೇನೆಂದು ಹಾಗೂ ನಾನು ಈ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಹೇಳಿಕೆ/ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಘೋಷಿಸುತ್ತೇನೆ. ಈ ಮೇಲೆ ತಿಳಿಸಿದ ಯಾವುದೇ ಮಾಹಿತಿಗಳು ಸರಿಯಾಗಿಲ್ಲವೆಂದು ಆಯ್ಕೆ ಪೂರ್ವದಲ್ಲಾಗಲೀ ಅಥವಾ ನಂತರದಲ್ಲಾಗಲಿ ಕಂಡು ಬಂದಲ್ಲಿ ಸದಸ್ಯ ಕಾರ್ಯದರ್ಶಿಗಳು/ಜಿಲ್ಲಾ ಆಯುಷ್ ಅಧಿಕಾರಿಗಳು ಹಾಸನ ಇವರು ಕೈಗೊಳ್ಳುವ ಸೂಕ್ತ ಕಾನೂನು ಕ್ರಮಕ್ಕೆ ನಾನು ಬದ್ಧನಾಗಿರುತ್ತೇನೆ/ಳೆ.

ಸ್ಥಳ :

ಅರ್ಜಿದಾರನ/ಳ ಸಹಿ.

ದಿನಾಂಕ :

APPLICATION

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಹಾಸನ ಆಯುಷ್ ಇಲಾಖೆ

ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ ಹೊಸಲೈನ್ ರೋಡ್, ಹಾಸನ-573201

ದೂರವಾಣಿ ಸಂಖ್ಯೆ: 08172-272272

## ಪರಿಶೀಲನಾ ಪಟ್ಟಿ(Check List)

| ಕ್ರ. ಸಂ. | ವಿವರ | ಅಭ್ಯರ್ಥಿಗಳು ಭರ್ತಿ ಮಾಡತಕ್ಕದ್ದು | ಕಛೇರಿ ಉಪಯೋಗಕ್ಕೆ | |
|---|---|---|---|---|
| | | ಹೌದು/ ಇಲ್ಲ | ಹೌದು/ ಇಲ್ಲ | ಷರಾ |
| 1. | ಅರ್ಜಿಯನ್ನು ಸಂಪೂರ್ಣವಾಗಿ ತುಂಬಲಾಗಿದೆ | | | |
| 2. | ಭಾವಚಿತ್ರವನ್ನು ಅಂಟಿಸಲಾಗಿದೆ | | | |
| 3. | ಎಸ್.ಎಸ್.ಎಲ್.ಸಿ ಅಂಕಪಟ್ಟಿ ಪ್ರತಿ ಲಗತ್ತಿಸಿದೆ | | | |
| 4. | ಅಧಿಸೂಚನೆಯಲ್ಲಿ ನೀಡಿರುವ ವಿದ್ಯಾರ್ಹತೆಯ ಅಂಕಪಟ್ಟಿ ಪ್ರತಿಗಳನ್ನು ಲಗತ್ತಿಸಿದೆ | | | |
| 5. | ಆಯುಷ್ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಿರುವ ಅನುಭವದ ಪ್ರಮಾಣ ಪತ್ರ ಲಗತ್ತಿಸಿದೆ(ಅನ್ವಯಿಸುವುದಾದರೆ ಮಾತ್ರ) | | | |
| 6. | ಕೆ.ಎ.ಯು.ಪಿ. ಬೋರ್ಡ್ / ಫಾರ್ಮಸಿ ಬೋರ್ಡ್ ರಿಜಿಸ್ಟ್ರೇಷನ್ ಪ್ರತಿ ಲಗತ್ತಿಸಿದೆ(ಅನ್ವಯಿಸುವುದಾದರೆ ಮಾತ್ರ) | | | |
| 7. | ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಿದೆ (ಅನ್ವಯಿಸುವುದಾದರೆ ಮಾತ್ರ) | | | |
| 8. | ಇತರೆ ಮೀಸಲಾತಿ ಪ್ರಮಾಣ ಪತ್ರ ಲಗತ್ತಿಸಿದೆ (ಅನ್ವಯಿಸುವುದಾದರೆ ಮಾತ್ರ) | | | |
| 9. | ಇ-ಮೇಲ್ ವಿಳಾಸ ನಮೂದಿಸಿದೆ | | | |
| 10. | ಹೆಚ್ಚುವರಿ ವಿದ್ಯಾರ್ಹತೆ ಪ್ರಮಾಣ ಪತ್ರ ಲಗತ್ತಿಸಿದೆ | | | |

ಅಭ್ಯರ್ಥಿಯ ಸಹಿ.

ಅರ್ಜಿಯನ್ನು ಪರಿಶೀಲಿಸಿದ ಅಧಿಕಾರಿ/ಸಿಬ್ಬಂದಿಯವರ ಸಹಿ:

ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಮಟ್ಟದ ಆಯುಷ್ ನೇಮಕಾತಿ ಸಮಿತಿ,
ಜಿಲ್ಲಾ ಆಯುಷ್ ಅಧಿಕಾರಿಗಳು, ಹಾಸನ.

APPLICATION